**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 22-11 -2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಶ್ರೀ. TMG ವಕೀಲರವರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ನನಗೆ 3 ಎಕರೆ ಜಮೀನು ಇದೆ. ಕಬ್ಬು, ಭತ್ತ, ರಾಗಿ ಬೆಳೆಯುತ್ತೇನೆ. ಸದರಿ ಬೆಳೆಗಳಿಂದ 3 ತಿಂಗಳು ಮತ್ತು 6 ತಿಂಗಳಿಗೊಮ್ಮೆ ಆದಾಯ ಬರುತ್ತದೆ. ಕಬ್ಬು ವರ್ಷಕ್ಕೊಮ್ಮೆ ಆದಾಯ ಬರುತ್ತದೆ. ವರ್ಷಕ್ಕೆ ಸುಮಾರು 2-3 ಲಕ್ಷ ಆದಾಯ ಬರುತ್ತದೆ. ಕೆಲವೊಮ್ಮೆ ನಷ್ಟವೂ ಆಗುತ್ತದೆ. ನನಗೆ ಒಬ್ಬನೇ ಮಗ. ಸದರಿ ಮಗ ದ್ವಿತೀಯ ಪಿಯುಸಿ ಮಾಡಿ ನನ್ನೊಂದಿಗೆ ವ್ಯವಸಾಯ ಮಾಡುತ್ತಿದ್ದಾರೆ. ಸದರಿಯವರು ಮದುವೆ ಆಗಿಲ್ಲ. ನನಗೆ ಎಷ್ಟು ಆದಾಯ ಬರುತ್ತದೆ ಎಂದು ತೋರಿಸಲು ಆದಾಯ ಪ್ರಮಾಣ ಪತ್ರ ಪಡೆದಿಲ್ಲ. ನನಗೆ ಬಿಪಿಎಲ್ ಕಾರ್ಡ್ ಇದೆ.

ನನ್ನ ಅತ್ತೆಯನ್ನು ಮಂಡ್ಯದ ಬೇವಿನಹಳ್ಳಿಗೆ ಮದುವೆ ಮಾಡಿದ್ದು, ಸದರಿ ನನ್ನ ಮಾವನ ಮನೆಗೆ ಆರೋಪಿಯು ಬರುತ್ತಿದ್ದರಿಂದ ಪರಿಚಯವಾಗಿರುತ್ತಾರೆ. ಬೇವಿನಹಳ್ಳಿ ಮತ್ತು ಪಿ ಹಳ್ಳಿ ನಡುವೆ ಸುಮಾರು 2 ವರೆ ಯಿಂದ 4 ಕಿಮೀ ಅಂತರವಿದೆ. ನಾನು ಒಂದು ಬಾರಿ ಆರೋಪಿಯ ಮನೆಗೆ ಹೋಗಿದ್ದೆನೆ. ನಾನು ಆರೋಪಿಯು ಸಾಲ ಕೇಳಿದ ನಂತರ ಕೊಡುವ ಪೂರ್ವದಲ್ಲಿ ಆರೋಪಿಯ ಮನೆಗೆ ಹೋಗಿದ್ದೆ. ನಾನು ಸಾಲ ಕೊಟ್ಟಾಗ 2 ತಿಂಗಳ ಅವಧಿ ಕೇಳಿದ್ದರಿಂದ 2 ತಿಂಗಳು ಆದ ನಂತರ ಸಾಲ ಮರುಪಾವತಿ ಕೇಳಲು ಮತ್ತೊಮ್ಮೆ ಹೋಗಿದ್ದೆ.

ಆರೋಪಿಯು ಯಾರಿಂದ ಎಷ್ಟು ಕೈಸಾಲ ಮಾಡಿದ್ದಾರೆಂದು ನಾನು ಕೇಳಿಲ್ಲ. ಸಾಮಾನ್ಯವಾಗಿ ದೊಡ್ಡ ಮೊತ್ತದ ಸಾಲ ನೀಡುವಾಗ ಯಾರಿಂದ ಎಷ್ಟು ಮತ್ತು ಏಕೆ ಸಾಲ ಇದೆ ಎಂದು ವಿಚಾರಿಸಿ ನೀಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ನಾನು ಕೇಳುವುದಿಲ್ಲ ಎನ್ನುತ್ತಾರೆ. ಆರೋಪಿಯ ಗಂಡ ಪೊಲೀಸ್ ಇಲಾಖೆಯಲ್ಲಿ ಹೋಮ್ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದಾರೆಂದರೆ ಸರಿ. ಸದರಿಯವರು ಮನೆ ಖರ್ಚಿಗೆ ಸಾಕಾಗುವಷ್ಟು ಸಂಪಾದನೆ ಮಾಡುತ್ತಾರೆಂದರೆ ನನಗೆ ಗೊತ್ತಿಲ್ಲ.

ಆರೋಪಿಯ ಮನೆಯಲ್ಲಿ ಆರೋಪಿ, ಅವರ ಗಂಡ ಮತ್ತು ಒಂದು ಸಾಕು ಮಗು ಇದೆ. ಆರೋಪಿಯ ಗಂಡನ ಹೆಸರಿನಲ್ಲಿ ಜಮೀನು ಇದೆ ಎಂದರೆ ಸರಿ. ಸದರಿಯವರಿಗೆ ಎಷ್ಟು ಜಮೀನು ಇದೆ ಎಂದು ನಾನು ವಿಚಾರಿಸಿಲ್ಲ. ಸದರಿ ಜಮೀನಿನಿಂದ ಉತ್ತಮ ಆದಾಯ ಇದೆ ಎಂದರೆ ನನಗೆ ಗೊತ್ತಿಲ್ಲ. ದಿ 10-11-2021 ರಂದು ಆರೋಪಿಯವರು ನನ್ನ ಅತ್ತೆಯ ಮನೆಯಲ್ಲಿ ನನ್ನನ್ನು ಸಾಲ ಕೇಳಿರುತ್ತಾರೆ. ಸದರಿ ವಿಚಾರವನ್ನು ನನ್ನ ನೋಟೀಸ್, ದೂರು ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಸಾಲ ಕೇಳಲು ಆರೋಪಿ, ಆಕೆಯ ಗಂಡ ಬಂದಿದ್ದು, ಸದರಿ ವೇಳೆಯಲ್ಲಿ ನನ್ನ ಅತ್ತೆ ಇದ್ದರು. ಸದರಿ ವಿಚಾರವನ್ನು ನನ್ನ ನೋಟೀಸ್, ದೂರು ಮತ್ತು ಪ್ರಮಾಣ ಪತ್ರದಲ್ಲಿ ಹೇಳಲು ತೊಂದರೆ ಇರಲಿಲ್ಲ. ಸದರಿ ಸಾಲವನ್ನು ಕೇಳಿದ ದಿನದಂದೇ ನೀಡಿರದೇ ಮರುದಿನ ನೀಡಿರುತ್ತೇನೆ. ಸದರಿ ಹಣವನ್ನು ನಮ್ಮ ಮನೆಗೆ ಬಂದು ಬೆಳಗ್ಗೆ 8.30-9.00 ಗಂಟೆ ಸಮಯದಲ್ಲಿ ಪಡೆದುಕೊಂಡಿರುತ್ತಾರೆ. ಸದರಿ

ವಿಚಾರವನ್ನು ನನ್ನ ನೋಟೀಸ್, ದೂರು ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಸಾಕ್ಷಿ ಮುಂದುವರೆದು ಮರೆತು ಹೋಗಿತ್ತು ಎನ್ನುತ್ತಾರೆ. ಸದರಿ ಹಣ ನೀಡಿದಾಗ ಮನೆಯಲ್ಲಿ ನಾನು, ನನ್ನ ಹೆಂಡತಿ ಮತ್ತು ನನ್ನ ಮಗ ಇದ್ದೇವು. ಸದರಿ ವಿಚಾರ ಬರೆಸಲು ತೊಂದರೆ ಇತ್ತೆ ಎಂದರೆ ನನಗೆ ಸದರಿ ವಿಚಾರ ಗೊತ್ತಾಗಲಿಲ್ಲ ಎನ್ನುತ್ತಾರೆ.

ಸದರಿ ಸಾಲ ನೀಡಿದ ಹಣವು ನಮ್ಮ ಮನೆಯಲ್ಲಿಯೇ ಇತ್ತು. ಕುರಿ, ಆಡು ಸಾಗಾಣಿಕೆ ಮತ್ತು ಹಸುವಿನ ಹಾಲುವಿನಿಂದ ತಿಂಗಳಿಗೆ 30-40 ಸಾವಿರ ಆದಾಯವಿದ್ದು, ಕಬ್ಬಿನ ಆದಾಯ,ಭತ್ತ, ರಾಗಿಯ ಮಾರಾಟದಿಂದ ಹಣವಿತ್ತು. ಸದರಿ ಮಾರಾಟದಿಂದ ಆದಾಯ ಇತ್ತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ನನ್ನ ಬ್ಯಾಂಕ್ ಖಾತೆಯ ಮಾಹಿತಿಯನ್ನು ನೀಡಿಲ್ಲ. ಸಾಕ್ಷಿ ಮುಂದುವರೆದು ಬ್ಯಾಂಕ್ ಗೆ ಹಣ ಹಾಕಿರಲಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಅದರಲ್ಲಿ ಯಾವುದೇ ಹಣವಿಲ್ಲ ಎನ್ನುತ್ತಾರೆ.

ಮಂಚೇಗೌಡ ಮತ್ತು ಶೀಲಾ ಎಂಬುವವರ ಪರಿಚಯವಿಲ್ಲ. ಸದರಿ ಸಾಲ ನೀಡಿದ 2 ತಿಂಗಳ ನಂತರ ನಾನು ಆರೋಪಿಯನ್ನು ಭೇಟಿ ಮಾಡಿದ್ದು, ಆದರೆ ನಿರ್ದಿಷ್ಟ ದಿನಾಂಕ ಗೊತ್ತಿಲ್ಲ. ಆದರೆ ನಾನು ಹೋಗಿ ಕೇಳಿದ ನಂತರ ಅದೇ ತಿಂಗಳ 16 ನೇ ತಾರೀಖಿನಂದು ಆರೋಪಿಯು ನನಗೆ ಚೆಕ್ ನೀಡಿರುತ್ತಾರೆ. ಆರೋಪಿಯು ಚೆಕ್ ನ್ನು ಊರಿಗೆ ತಂದು ಕೊಟ್ಟಿರುತ್ತಾರೆ. ಸದರಿ ವಿಚಾರವನ್ನು ದೂರಿನಲ್ಲಿ ಹೇಳಿದ್ದೆನೆ. ಸದರಿ ವಿಚಾರವನ್ನು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಕೆನರಾ ಬ್ಯಾಂಕ್ ನ ಚೆಕ್ ನೀಡಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರೇ ಬರೆದು ತಂದಿದ್ದರು ಎನ್ನುತ್ತಾರೆ. ಚೆಕ್ ನಲ್ಲಿ 3 ಲಕ್ಷ ಬರೆದಿರುವುದನ್ನು ನಾನು ನೋಡಿರುತ್ತೇನೆ. ಚೆಕ್ ನಲ್ಲಿ ಏನೇನು ಭರ್ತಿ ಮಾಡಿತ್ತು ಎಂದು ನನಗೆ ಗೊತ್ತಿಲ್ಲ.

ಮಂಚೇಗೌಡ ಎಂಬುವವರು ನಮ್ಮ ಪಕ್ಕದ ಊರಿನವರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಂಚೇಗೌಡ ಬಿನ್ ಮಾದೇಗೌಡ ಪರಿಚಯವಿದ್ದರೂ ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ದಿ 16-01-2021 ರಂದು ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ. ಸದರಿ ಚೆಕ್ ನ್ನು ಬೆಳಗ್ಗೆ 8.00-9.00 ಗಂಟೆ ವೇಳೆಯಲ್ಲಿ ಆರೋಪಿಯು ನೀಡಿದ್ದರು. ಆರೋಪಿ ಮತ್ತು ಆಕೆಯ ಗಂಡ ಬಂದು ಚೆಕ್ ನೀಡಿದಾಗ ನಮ್ಮ ಮನೆಯಲ್ಲಿ ನನ್ನ ಹೆಂಡತಿ, ನನ್ನ ಮಗ ಇದ್ದರು. ಸದರಿ ವಿಚಾರವನ್ನು ನನ್ನ ನೋಟೀಸ್, ದೂರು ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಗೊತ್ತಾಗಲಿಲ್ಲ ಎನ್ನುತ್ತಾರೆ. ಸದರಿ ನೋಟೀಸ್ ಮತ್ತು ದೂರನ್ನು, ಮುಖ್ಯವಿಚಾರಣೆಯನ್ನು ನಾನು ಓದಿಸಿ ತಿಳಿದುಕೊಂಡು ಸಹಿ ಮಾಡಲು ಪ್ರಯತ್ನಿಸಿಲ್ಲ.

ನಾನು ಚೆಕ್ ನ್ನು ಬ್ಯಾಂಕ್ ಗೆ ಮದ್ಯಾಹ್ನ 12.30 ರಲ್ಲಿ ಹಾಜರುಪಡಿಸಿದ್ದೆ. ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದ 1 ವಾರದ ನಂತರ ಬ್ಯಾಂಕ್ ನಿಂದ ಹಿಂಬರಹ ಬಂದಿರುತ್ತದೆ. ಸದರಿ ಹಿಂಬರಹ ಬಂದ 1 ವಾರದ ನಂತರ ಜನವರಿ 29 ನೇ ತಾರೀಖಿನಂದು ಆರೋಪಿಯನ್ನು ಅವರ ಮನೆಯ ಬಳಿ ಭೇಟಿ ಮಾಡಿದ್ದು, ಸದರಿ ವೇಳೆಯಲ್ಲಿ ಆರೋಪಿ ಮತ್ತು ಆಕೆಯ ಗಂಡ ಇದ್ದರು. ಸದರಿ ವಿಚಾರವನ್ನು ನನ್ನ ನೋಟೀಸ್, ದೂರು ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದ್ದೆನೆ. ಸದರಿ ಹಿಂಬರಹವನ್ನು ಸುಮಾರು 1.30 ಕ್ಕೆ ಬ್ಯಾಂಕ್ ನವರು ನೀಡಿದ್ದಾರೆ. ಸದರಿ ಹಿಂಬರಹದಲ್ಲಿ ಸಾಕಷ್ಟು ಹಣವಿಲ್ಲ ಬರೆದಿರುವ ವಿಚಾರವನ್ನು ಬ್ಯಾಂಕ್ ನವರು ಹೇಳಿರುತ್ತಾರೆ. ನಾನು

ಆರೋಪಿಯನ್ನು ಚೆಕ್ ಅಮಾನ್ಯವಾದ ಬಗ್ಗೆ ವಿಚಾರಿಸಿದಾಗ ಸದರಿಯವರು ಯಾವುದೇ ಪ್ರತಿಕ್ರಿಯೆ ನೀಡದೇ ನನ್ನನ್ನು ಕಳುಹಿಸಿರುತ್ತಾರೆ. ಆರೋಪಿಯ ಮನೆಗೆ ಬೆಳಗ್ಗೆ 8.30-9.00 ಗಂಟೆಗೆ ಹೋಗಿದ್ದೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು